ಬಂಟವಾಳ ತಾಲ್ಲೂಕಿನ ಸಹಾಯಕ ವಿದ್ಯಾಧಿಕಾರಿಗಳ ಕಛೇರಿಯಂ ಕಟ್ಟಡದ ಬಗ್ಗೆ

೧೪೬೪. ಶ್ರೀ ಬಿ. ರಮಾನಾಥ ರೈ (ಬಂಟವಾಳ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಬಂಟ್ವಾಳ ತಾಲ್ಲೂಕು ಸಹಾಯಕ ವಿದ್ಯಾಧಿಕಾರಿಗಳ ಕಛೇರಿಯು ಖಾಸಗಿ ಕಟ್ಟಡದಲ್ಲಿ ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಸದರಿ ಸಹಾಯಕ ವಿದ್ಯಾಧಿಕಾರಿಗಳ ಕಛೇರಿಗೆ ಸ್ವಂತ ಕಟ್ಟಡ ಕಟ್ಟಿಸಿಕೊಡಲು ಸರ್ಕಾರದವರು ಕ್ರಮ ತೆಗೆದುಕೊಳ್ಳುವರೇ ?

ಇ) ಹಾಗಿದ್ದಲ್ಲಿ ಈ ಕಟ್ಟಡದ ಕೆಲಸ ಎಂದು ಪ್ರಾರಂಭವಾಗುವುದು ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಬಂದಿದೆ.

ಆ) ಮತ್ತು ಇ) ಲೋಕೋಪಯೋಗಿ ಇಲಾಖೆಯಿಂದ ನಕ್ಷೆ ಮತ್ತು ದರ ಸೂಚಿ ಪಟ್ಟಿಯನ್ನು ಕೇಳಲಾಗಿದೆ. ಇದಂ ಬಂದಕೂಡಲೇ ಹಣದ ಪರಿಮಿತಿಯಲ್ಲಿ ಪರಿಶೀಲಿಸಲಾಗುವುದು.

ಶಿಕ್ಷಣ ಇಲಾಖೆಯಲ್ಲಿ ಬಡ್ತಿ ನೀಡಿರುವ ಬಗ್ಗೆ

೧೪೬೭. ಶ್ರೀ ಐ.ಬಿ. ಶಂಕರ್ (ಚಿಕ್ಕಮಗಳೂರು).—ಶಿಕ್ಷಣ ಮಂತ್ರಿಯವರು ದಯವಿಟ್ಟು ಈ ವಿಷಯವನ್ನು ತಿಳಿಸುವರೆ ?

ಅ) ಶಿಕ್ಷಣ ಇಲಾಖೆಯಲ್ಲಿ ಅಧೀಕ್ಷಕರಾಗಿ ಮತ್ತು ಪ್ರಥಮದರ್ಜೆ ಗುಮಾಸ್ತರುಗಳಾಗಿ ೧೯೮೪ ರಲ್ಲಿ ನೀಡಲಾದ ಮುಂಬಡ್ತಿಗಳಿಗೆ ಅರ್ಹತಾ ದಿನಾಂಕಗಳನ್ನು ಪ್ರಕಟಿಸಲಾಗಿದೆಯೇ ?

ಆ) ಹಾಗಿದ್ದಲ್ಲಿ ೧೯೮೩–೮೪ರಿಂದ ಈವರೆಗೆ ನೀಡಲಾಗಿರುವ ಅರ್ಹತಾ ದಿನಾಂಕಗಳು ಎಲ್ಲಿಗೆ ಕೊನೆಗೊಂಡಿವೆ ?

ಇ) ಇನ್ನು ಆಂತಿಮಗೊಳಿಸಬೇಕಾದರೆ ಎಷ್ಟು ಕಾಲಾವಕಾಶ ಬೇಕು ?

ಈ) ೧೯೮೪ನೇ ಇಸವಿಯಿಂದ ಪರಿಶಿಷ್ಟ ಜಾತಿ ಮತ್ತು ಪಂಗಡದ ಗುಮಾಸ್ತರುಗಳಿಗೆ ಮುಂಬಡ್ತಿಯು ಶೇಕಡ ೧೮ರಂತೆ ನೀಡಲಾಗಿದೆಯೆ ?

ಉ) ಇವರಲ್ಲಿ ಪ್ರತ್ಯೇಕವಾಗಿ ಸರ್ಕಾರಿ, ಸರ್ಕಾರ ವಹಿಸಿಕೊಂಡಿರುವ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಹಾಗೂ ಪುರಸಭಾ ಸಂಸ್ಥೆಗಳಿಂದ ಬಂದಿರುವ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಎಷ್ಟು ಗುಮಾಸ್ತರುಗಳಿಗೆ ಮುಂಬಡ್ತಿಯು ಸಿಕ್ಕಿದೆ ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಇಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಆದಷ್ಟು ಶೀಘ್ರವಾಗಿ ಮಾಡಲಾಗುವುದು.

ಈ) ಹೌದು.

ಉ)

	ಪ. ಜಾತಿ	ಪ. ಪಂಗಡ
೧) ಸರ್ಕಾರಿ	೯೨	೧೩
೨) ತಾ. ಅ. ಮಂ. ಳ	೧	೦
೩) ಪುರಸಭೆ	೫	೦